**ಅಫ್ಘಾನಿಸ್ತಾನದ ಹಂಗಾಮಿ ವಿದೇಶಾಂಗ ಸಚಿವರೊಂದಿಗೆ ವಿದೇಶಾಂಗ ಕಾರ್ಯದರ್ಶಿಯವರ ಸಭೆ**

ಜನವರಿ 08, 2025

ಇಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ  ಅವರು ಅಫ್ಘಾನಿಸ್ತಾನದ ಹಂಗಾಮಿ ವಿದೇಶಾಂಗ ಸಚಿವ ಮೌಲಾವಿ ಅಮೀರ್ ಖಾನ್ ಮುತ್ತಕಿ ಅವರನ್ನು ದುಬೈನಲ್ಲಿ ಭೇಟಿಯಾದರು. ಉಭಯ ದೇಶಗಳು ದ್ವಿಪಕ್ಷೀಯ ಸಂಬಂಧಗಳು ಮತ್ತು ಪ್ರಾದೇಶಿಕ ಅಭಿವೃದ್ಧಿಗಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಿದವು.

2. ವಿದೇಶಾಂಗ ಕಾರ್ಯದರ್ಶಿಗಳು ಅಫ್ಘನ್ ಜನರೊಂದಿಗೆ ಭಾರತದ ಐತಿಹಾಸಿಕ ಸ್ನೇಹವನ್ನು ಮತ್ತು ಉಭಯ ದೇಶಗಳ ಜನರ ನಡುವಿನ ಬಲವಾದ ಸಂಪರ್ಕವನ್ನು ಒತ್ತಿಹೇಳಿದರು. ಈ ಸಂದರ್ಭದಲ್ಲಿ, ಅಫ್ಘನ್ ಜನರ ತುರ್ತು ಅಭಿವೃದ್ಧಿ ಅಗತ್ಯಗಳಿಗೆ ಸ್ಪಂದಿಸಲು ಭಾರತ ಸಿದ್ಧವಾಗಿರುವುದನ್ನು ಅವರು ತಿಳಿಸಿದರು.

3. ಎರಡೂ ಕಡೆಯವರು ಚಾಲ್ತಿಯಲ್ಲಿರುವ ಭಾರತೀಯ ಮಾನವೀಯ ನೆರವು ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಿದರು. ಅಫ್ಘಾನಿಸ್ತಾನದ ಜನರೊಂದಿಗೆ ತೊಡಗಿಸಿಕೊಳ್ಳುವ ಮತ್ತು ಬೆಂಬಲ ನೀಡುವ ಭಾರತೀಯ ನಾಯಕತ್ವದ ನಡೆಯನ್ನು ಅಫ್ಘನ್ ಸಚಿವರು ಶ್ಲಾಘಿಸಿದರು ಮತ್ತು ಧನ್ಯವಾದ ಹೇಳಿದರು. ಅಭಿವೃದ್ಧಿ ಚಟುವಟಿಕೆಗಳ ಪ್ರಸ್ತುತ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ನಡೆಯುತ್ತಿರುವ ಮಾನವೀಯ ನೆರವು ಕಾರ್ಯಕ್ರಮದ ಜೊತೆಗೆ, ಭಾರತವು ಸದ್ಯದಲ್ಲಿಯೇ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಪರಿಗಣಿಸಲು ನಿರ್ಧರಿಸಲಾಯಿತು.

4. ಅಫ್ಘನ್ ಜನರ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ, ಭಾರತವು ಅಫ್ಘಾನಿಸ್ತಾನಕ್ಕೆ ಮಾನವೀಯ ನೆರವು ನೀಡಲು ನಿರ್ಧರಿಸಿದೆ ಎಂಬುದನ್ನು ಸ್ಮರಿಸಬಹುದು. ಭಾರತವು ಇಲ್ಲಿಯವರೆಗೆ 50,000 ಮೆಟ್ರಿಕ್ ಟನ್ ಗೋಧಿ, 300 ಟನ್ ಔಷಧಗಳು, 27 ಟನ್ ಭೂಕಂಪ ಪರಿಹಾರ ನೆರವು, 40,000 ಲೀಟರ್ ಕೀಟನಾಶಕಗಳು, 100 ಮಿಲಿಯನ್ ಪೋಲಿಯೊ ಡೋಸ್‌ಗಳು, 1.5 ಮಿಲಿಯನ್ ಡೋಸ್ ಕೋವಿಡ್ ಲಸಿಕೆ, ಮಾದಕ ವ್ಯಸನ ಬಿಡಿಸುವ ಕಾರ್ಯಕ್ರಮಕ್ಕಾಗಿ 11,0000 ಯುನಿಟ್ ನೈರ್ಮಲ್ಯ ಕಿಟ್‌ಗಳು, 500 ಯುನಿಟ್ ಚಳಿಗಾಲದ ಉಡುಪುಗಳು ಮತ್ತು 1.2 ಟನ್ ಸ್ಟೇಷನರಿ ಕಿಟ್‌ಗಳು ಇತ್ಯಾದಿಗಳನ್ನು ಒಳಗೊಂಡಿರುವ ಹಲವಾರು ಸಾಗಣೆಗಳನ್ನು ರವಾನಿಸಿದೆ.

5. ಅಫ್ಘಾನಿಸ್ತಾನದ ಮನವಿಗೆ ಪ್ರತಿಕ್ರಿಯೆಯಾಗಿ, ಭಾರತವು ಆರೋಗ್ಯ ಕ್ಷೇತ್ರ ಮತ್ತು ನಿರಾಶ್ರಿತರ ಪುನರ್ವಸತಿಗೆ ಪ್ರಾಥಮಿಕವಾಗಿ ಹೆಚ್ಚಿನ ಬೆಂಬಲವನ್ನು ನೀಡಲಿದೆ.

ಅಫ್ಘಾನಿಸ್ತಾನದ ಯುವ ಪೀಳಿಗೆಗೆ ಹೆಚ್ಚು ಮೌಲ್ಯಯುತವಾಗಿರುವ ಕ್ರೀಡಾ (ಕ್ರಿಕೆಟ್) ಸಹಕಾರವನ್ನು ಬಲಪಡಿಸುವ ಬಗ್ಗೆಯೂ ಉಭಯ ದೇಶಗಳು ಚರ್ಚಿಸಿದವು. ಅಫ್ಘಾನಿಸ್ತಾನಕ್ಕೆ ಮಾನವೀಯ ನೆರವು ಸೇರಿದಂತೆ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಬೆಂಬಲಿಸಲು ಚಾಬಹಾರ್ ಬಂದರಿನ ಬಳಕೆಯನ್ನು ಉತ್ತೇಜಿಸಲು ಸಹ ಒಪ್ಪಿಗೆ ನೀಡಲಾಯಿತು.

6. ಭಾರತದ ಸುರಕ್ಷತಾ ಕಳಕಳಿಗಳನ್ನು ಅಫ್ಘಾನಿಸ್ತಾನವು ಅರ್ಥ ಮಾಡಿಕೊಂಡಿದೆ ಮತ್ತು ತನ್ನ ಸಮ್ಮತಿಯನ್ನು ಸೂಚಿಸಿದೆ. ಉಭಯ ಕಡೆಯವರು ಸಂಪರ್ಕದಲ್ಲಿರಲು ಮತ್ತು ವಿವಿಧ ಹಂತಗಳಲ್ಲಿ ನಿಯಮಿತ ಸಂಪರ್ಕಗಳನ್ನು ಮುಂದುವರಿಸಲು ಒಪ್ಪಿಕೊಂಡರು.

ದುಬೈ

ಜನವರಿ 08, 2025